





# ಕಳ್ಳಿ ಎಂಬ ಮಳ್ಳಿ!



■ ಚಿತ್ರ ಬರಹ:
**ಪದ್ಮಜಾ ಸುಂದರೇಶ್**

**ಕ್ಯಾ**ಕ್ಟಸ್ ಅಥವಾ ಕಳ್ಳಿ ಸಾಮಾನ್ಯವಾಗಿ ಎಲ್ಲ ಕಡೆಯೂ ಕಂಡು ಬರುವ ಒಂದು ಸಸ್ಯ. ಇದರ ತವರು ಅಮೆರಿಕವಾದರೂ ಭಾರತ, ಆಫ್ರಿಕ, ಮಡಗಾಸ್ಕರ್ ಹಾಗೂ ಶ್ರೀಲಂಕಾಗಳಲ್ಲಿಯೂ ಹೆಚ್ಚಾಗಿ ಕಾಣಸಿಗುತ್ತದೆ. ವೈಜ್ಞಾನಿಕವಾಗಿ ಕಳ್ಳಿಯು ಕ್ಯಾಕ್ಟೇಸಿ ಕುಟುಂಬಕ್ಕೆ ಸೇರಿದೆ.

ವಾಸ್ತವವಾಗಿ ಕ್ಯಾಕ್ಟಸ್ ಮರುಭೂಮಿಯ ಸಸ್ಯ. ಮರುಭೂಮಿಯಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ಮಳೆ ಬೀಳುವುದರಿಂದ, ಈ ಸಸ್ಯಗಳು ತಮ್ಮಲ್ಲಿ ಇರುವ ನೀರನ್ನು ಹಿಡಿದಿಟ್ಟುಕೊಳ್ಳುವುದೇ ಒಂದು ವಿಶೇಷ. ಇದರ ಎಲೆಗಳು ಮುಳ್ಳುಗಳಾಗಿದ್ದು, ನೀರು ಆವಿಯಾಗದಂತೆ ತಡೆಯುತ್ತವೆ. ಕಾಂಡವು ಮೃದುವಾಗಿ, ರಸಭರಿತವಾಗಿ ಇರುತ್ತವೆ. ಅಲ್ಲದೆ ಹಸಿರಾಗಿಯೂ ಇರುತ್ತವಾದ್ದರಿಂದ ದ್ಯುತಿ ಸಂಶ್ಲೇಷಣೆಯನ್ನೂ ನಡೆಸುತ್ತವೆ.

ಕಾಂಡದ ಮೇಲೆ ಇರುವ ದಪ್ಪನಾದ ಕ್ಯೂಟಿಕಲ್‌ನ ಪದರ ಇದರಲ್ಲಿನ ನೀರು ಆವಿಯ ರೂಪದಲ್ಲಿ ನಷ್ಟವಾಗುವುದನ್ನು ತಡೆಯುತ್ತದೆ. ಕೆಲವು ಕ್ಯಾಕ್ಟಸ್‌ಗಳಲ್ಲಿ ಬೇರು ಭೂಮಿಯಲ್ಲಿ ಬಹಳ ಆಳಕ್ಕೆ ಇಳಿದಿರುತ್ತದೆ. ಅಥವಾ ಸುತ್ತಲೂ ವಿಶಾಲವಾಗಿ ಹರಡಿಕೊಂಡಿರುತ್ತವೆ. ಇದರಿಂದ ನೀರನ್ನು ಹೀರಲೂ ಅನುಕೂಲ.

ಕ್ಯಾಕ್ಟಸ್ ಹೂವುಗಳು ಹಲವು ಬಣ್ಣಗಳಲ್ಲಿದ್ದು, ನೋಡಲು ಬಹಳ ಸುಂದರ. ಇವುಗಳಲ್ಲಿ ಸಸ್ಯಾಭಿವೃದ್ಧಿಯು, ಬೀಜಗಳಿಂದ ಅಥವಾ ನಿರ್ಲಿಂಗ ರೀತಿಯಲ್ಲಿ ಕಾಂಡಗಳಿಂದ ಆಗುತ್ತದೆ.

ಕ್ಯಾಕ್ಟಸ್‌ಗಳು ಹಲವು ರೀತಿಯಲ್ಲಿ ಉಪಯುಕ್ತವಾಗಿವೆ. ಇವುಗಳನ್ನು ಅಲಂಕಾರಿಕ ಸಸ್ಯಗಳಾಗಿ ಬೆಳೆಸುತ್ತಾರೆ. ಹೊಲ, ಗದ್ದೆಗಳ ಅಂಚಿನಲ್ಲಿ ಬೇಲಿಯಾಗಿಯೂ ಬೆಳೆಸುತ್ತಾರೆ. ಕೆಲವು ದನಕರುಗಳಿಗೆ ಮೇವಾಗಿ ಉಪಯುಕ್ತವಾಗಿವೆ. ಕೆಲವು ಕ್ಯಾಕ್ಟಸ್‌ಗಳ ಹಣ್ಣುಗಳನ್ನು ತಿನ್ನುವುದೂ ಉಂಟು.